ಇ) ಸರ್ಕಾರ ಮಹಾತ್ಮಾಕಾಂಕ್ಷಿಯಾಗಿರುವ ಈ ವಿನೂತನ ಯೋಜನೆಯನ್ನು ಯಾವ ಕಾಲಮಿತಿಗೊಳಪಡಿಸಿ ಪ್ರಾರಂಭಿಸುವುದು?

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಬಂದಿದೆ.

ಆ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಇಂತಹ ಯಾವುದೇ ಪ್ರಸ್ತಾವನೆ ಪರಿಶೀಲನೆಯಲ್ಲಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

576 (793) ಶ್ರೀ ಶಿವರಾಮು ಬಿ. (ಗಂಡಸಿ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಕೇಂದ್ರ ಸರ್ಕಾರಿ ವೈದ್ಯಕೀಯ ಶಿಕ್ಷಣ ಕಾಲೇಜಿನ ಪ್ರಗತಿ ಯಾವ ಹಂತದಲ್ಲಿದೆ;

ಆ) ಕಾಲೇಜನ್ನು ಪ್ರಾರಂಭಿಸಲು ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನ ನಿಯಮಾನುಸಾರ ಅಗತ್ಯ ಸ್ಥಳ ಸಿಬ್ಬಂದಿ ಮತ್ತು ಇತರೇ ವ್ಯವಸ್ಥೆ ಸಮರ್ಪಕವಾಗಿರುತ್ತದೆಯೇ;

ಇ) 2005-06ನ ಸಾಲಿನಲ್ಲಿ ಕಾಲೇಜನ್ನು ಪ್ರಾರಂಭಿಸಲು ಅಗತ್ಯ ವ್ಯವಸ್ಥೆ ಮಾಡಲಾಗಿದೆಯೇ;

ಈ) ಹಾಗಿಲ್ಲದಿದ್ದಲ್ಲಿ, ಮುಂದಿನ ಕ್ರಮವೇನು?

ಡಾ॥ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಹಾಸನ ವೈದ್ಯಕೀಯ ಕಾಲೇಜಿನ ಕಟ್ಟಡದ 4ನೇ ಅಂತಸ್ತಿನ ಕೆಲಸ ಪ್ರಗತಿಯಲ್ಲಿದ್ದು, ನೆಲ ಮಹಡಿ ಮತ್ತು ಮೊದಲನೆ ಮಹಡಿ ಕಟ್ಟಡದ ಕೆಲಸ ಪೂರ್ಣಗೊಂಡಿರುತ್ತದೆ.

ಆ) ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಸ್ಥಳಾವಕಾಶವಿದ್ದು ಇತರೆ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಸಿಬ್ಬಂದಿಯ ಕೊರತೆ ಇದೆ.

ಇ) ಮತ್ತು ಈ) ಭಾರತೀಯ ವೈದ್ಯಕೀಯ ಪರಿಷತ್ತಿನವರು ನ್ಯೂನತೆಗಳು ಗಮನಿಸಿರುತ್ತಾರೆ. ಕೆಲಸಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಭಾರತೀಯ ವೈದ್ಯಕೀಯ ಪರಿಷತ್ತು ಮತ್ತು ಕೇಂದ್ರ ಸರ್ಕಾರ ಅನುಮತಿ ನೀಡಿದ ನಂತರ ಪ್ರಾರಂಭಿಸಲಾಗುವುದು.

577 (799) ಶ್ರೀ ಸಿದ್ದು ಸವದಿ(ಜಮಖಂಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಮಖಂಡಿ ತಾಲ್ಲೂಕಿನಲ್ಲಿರುವ ಸಾರ್ವಜನಿಕ ಆಸ್ಪತ್ರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು (ಅವುಗಳಲ್ಲಿ ಸಿಬ್ಬಂದಿ ಮತ್ತು ಔಷಧಗಳ ಪೂರೈಕೆಯ ಸಂಪೂರ್ಣ ವಿವರ ಒದಗಿಸುವುದು);